Date : 26-10-2015

# ಕಾಫಿ ರಫ್ತು 2014–15ರಲ್ಲಿ ಗಣನೀಯ ಇಳಿಕೆ

ಭಾರತದಿಂದ 2014–15ರಲ್ಲಿ ಕಾಫಿ ರಫ್ತು ಅದರ ಹಿಂದಿನ ವರ್ಷದಲ್ಲಾಗಿದ್ದ 3,03,250 ಟನ್‌ಗಳಿಂದ ಗಣನೀಯ ಪ್ರಮಾಣದ ಇಳಿಕೆಯಾಗಿ 3,00,522 ಟನ್‌ಗಳಾಗಿವೆಯೆನ್ನಲಾಗಿದೆ. ಜಾಗತಿಕ ದರ ಇಳಿಕೆ ಮತ್ತಿತರ ಕಾರಣಗಳಿಂದಾಗಿ ರಫ್ತು ಇಳಿಕೆಯಾಗಿದೆಯೆಂದು ಕಾಫಿ ಮಂಡಳಿ ಅಧಿಕಾರಿಗಳು ಹೇಳಿದ್ದಾರೆನ್ನಲಾಗಿದೆ. ಜಾಗತಿಕ ದರದ ಅತೀವ ಬದಲಾವಣೆ, ಬ್ರೆಜಿಲ್, ಇಂಡೋನೇಶಿಯಾ ಮತ್ತು ವಿಯೆಟ್ನಾಂಗಳಾಂತಹ ರಾಷ್ಟ್ರಗಳ ಕರೆನ್ಸಿಗಳ ಅಪಮೌಲ್ಯಗಳಿಂದಾಗಿ ರಫ್ತು ನಿರ್ಧಾರಗಳು ಬಾಧಿತವಾಗಿತ್ತೆನ್ನಲಾಗಿದೆ. ಇದರೊಂದಿಗೆ ಚೈನಾದ ಅರ್ಥಿಕತೆಯ ವೇಗದಲ್ಲಿ ಇಳಿಕೆ ಮತ್ತು ಇದರ ಪ್ರಭಾವ ಇತರ ರಾಷ್ಟ್ರಗಳಿಗೆ ವಿಸ್ತರಣೆಯಾದುದು, ಡಾಲರ್ ಎದುರು ರುಪಾಯಿಯ ವಿನಿಮಯ ದರ ಇಳಿಕೆ, ಇವುಗಳು ರಫ್ತು ಇಳಿಕೆಯಾಗಲು ಕಾರಣವೆಂದು ಕಾಫಿ ಮಂಡಳಿಯ ಅಧಿಕಾರಿಗಳ ಅನಿಸಿಕೆ. ಇಟೆಲಿ, ಜರ್ಮನಿ, ಟರ್ಕಿ, ರಷ್ಯಾಯನ್ ಯೂನಿಯಾನ್ ಮತ್ತು ಬೆಲ್ಜಿಯಂ ಮತ್ತಿತರ ರಾಷ್ಟ್ರಗಳು ಭಾರತದ ಪ್ರಮುಖ ರಫ್ತು ಮಾಡುವ ಸ್ಥಳಗಳಾಗಿವೆ. ಕಾಫಿ ಮಂಡಳಿಯ ಪ್ರಥಮ ಅಂದಾಜಿನಂತೆ 2015–16ರಲ್ಲಿ ದೇಶದ ಒಟ್ಟು ಕಾಫಿ ಉತ್ಪಾದನೆ 355600 ಟನ್‌ಗಳಾಗಬಹುದೆನ್ನಲಾಗಿದೆ. 2014–15ರ ಒಟ್ಟು ದೇಶಿ ಕಾಫಿ ಉತ್ಪಾದನೆ 327000 ಟನ್‌ಗಳಾಗಿತ್ತೆನ್ನಲಾಗಿದೆ.